# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 322(355) |
| ಉತ್ತರಿಸಬೇಕಾದ ದಿನಾಂಕ | : | 13.08.2025 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ ( ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸುಳ್ಳು ದಾಖಲೆಗಳನ್ನು ನೀಡಿ ಸಾಮಾಜಿಕ ಭದ್ರತಾ ಪಿಂಚಣಿಗಳನ್ನು ಪಡೆಯುತ್ತಿರುವ ಅನುಮಾನಾಸ್ಪದ / ಅನರ್ಹ ಪ್ರಕರಣಗಳು ಇರುವುದು ನಿಜವೇ; ಇದ್ದಲ್ಲಿ, ಗುರುತಿಸಲಾಗಿರುವ ಅಂತಹ ಪ್ರಕರಣಗಳ ಒಟ್ಟು ಸಂಖ್ಯೆ ಎಷ್ಟು ; (ಜಿಲ್ಲಾವಾರು ಮತ್ತು ಸಾಮಾಜಿಕ ಭದ್ರತಾ ಯೋಜನೆವಾರು ಪ್ರಕರಣಗಳ ಮಾಹಿತಿ ನೀಡುವುದು ) | ರಾಜ್ಯದಲ್ಲಿ ಸುಳ್ಳು ದಾಖಲೆಗಳನ್ನು ನೀಡಿ ಸಾಮಾಜಿಕ ಭದ್ರತಾ ಪಿಂಚಣಿಗಳನ್ನು ಪಡೆಯುತ್ತಿರುವ ಪ್ರಕರಣಗಳ ಕುರಿತು ಕುಟುಂಬ Appನಿಂದ ಪಡೆಯಲಾದ ದತ್ತಾಂಶದೊಂದಿಗೆ ತಾಳೆ ಮಾಡಲಾಗಿ ಸಂಶಯಾತ್ಮಕ ಪ್ರಕರಣಗಳು ಕಂಡು ಬಂದಿದೆ. ಇಂತಹ ಪ್ರಕರಣಗಳನ್ನು ಗುರುತಿಸಿ ನೈಜತೆ ಬಗ್ಗೆ ವಿವರಗಳನ್ನು ಜಿಲ್ಲಾಧಿಕಾರಿಗಳಿಂದ ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಜಿಲ್ಲಾಧಿಕಾರಿಗಳಿಂದ ವರದಿ ಬಂದ ನಂತರ ನಿಯಮಗಳನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ. |
| ಆ) | ಈ ರೀತಿ ಪಿಂಚಣಿ ಪಡೆಯುತ್ತಿರುವವರಲ್ಲಿ ಯಾವ ರೀತಿಯ ಅನರ್ಹರರನ್ನು ಗುರುತಿಸಲಾಗಿದೆ; (ವಯಸ್ಸು, ಎಪಿಎಲ್ ಕಾರ್ಡ್, ಆದಾಯ ಮಿತಿ, ಸರ್ಕಾರಿ ನೌಕರ... ಇನ್ನಿತರೆ ರೀತಿಯಲ್ಲಿ) ಸಂಪೂರ್ಣ ವಿವರ ನೀಡುವುದು. | |
| ಇ) | ಇಂತಹ ಪ್ರಕರಣಗಳನ್ನು ಪುನರ್ ಪರಿಶೀಲಿಸಲು ಹಾಗೂ ಅನರ್ಹ ಫಲಾನುಭವಿಗಳ ಪಿಂಚಣಿ ರದ್ದುಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; | |
| ಈ) | ಸರ್ಕಾರಕ್ಕೆ ಈ ರೀತಿಯ ಪ್ರಕರಣಗಳಿಂದ ಪ್ರತಿ ಮಾಹೆ ಮತ್ತು ವಾರ್ಷಿಕವಾಗಿ ಆಗುತ್ತಿದೆ ಎಂದು ಅಂದಾಜಿಸಲಾಗಿರುವ ನಷ್ಟದ ಪ್ರಮಾಣ ಎಷ್ಟು? [ವಿವರ ನೀಡುವುದು] | |

**ಕಡತ ಸಂಖ್ಯೆ:ಆರ್‌ಡಿ 114 ಕೆಎಟಿ ಎಸ್‌ಎಸ್‌ಪಿ 2025**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**

